# ಜಿಲ್ಲಾಧಿಕಾರಿಯವರ ನ್ಯಾಯಾಲಯ, ತುಮಕೂರು ಜಿಲ್ಲೆ, ತುಮಕೂರು

ಪ್ರಕರಣ ಸಂಖ್ಯೆ: **R.A-04/2000-01**

ಉಪಸ್ಥಿತರು:- **K.P ಮೋಹನ್ ರಾಜ್, I.A.S.**
ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ,
ತುಮಕೂರು.

| ಮೇಲ್ಮನವಿದಾರರು | ವಿರುದ್ಧ- | ಪ್ರತಿವಾದಿಗಳು |
|---|---|---|
| L. ರಾಮಯ್ಯ ಬಿನ್ ಲಕ್ಷ್ಮಣ @<br>ಕುಂದೇಗೌಡ,<br>ಲಕ್ಷ್ಮೀಪುರ ಗ್ರಾಮ,<br>ಹುಲಿಯೂರು ದುರ್ಗ ಹೋಬಳಿ,<br>ಕುಣಿಗಲ್ ತಾಲ್ಲೂಕು. | | 1. ಉಪವಿಭಾಗಾಧಿಕಾರಿಗಳು,<br>ತುಮಕೂರು ಉಪವಿಭಾಗ,<br>ತುಮಕೂರು.<br>2. ಚಿಕ್ಕಹುಚ್ಚಯ್ಯ ಬಿನ್ ದೊಳ್ಳೇಗೌಡ,<br>ಲಕ್ಷ್ಮೀಪುರ ಗ್ರಾಮ<br>ಹುಲಿಯೂರುದುರ್ಗ ಹೋಬಳಿ,<br>ಕುಣಿಗಲ್ ತಾಲ್ಲೂಕು. |

ಮೇಲ್ಮನವಿದಾರರು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 50 ರಡಿಯಲ್ಲಿ ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ಇವರು ಪ್ರಕರಣ ಸಂಖ್ಯೆ: R.A-19/1995-96 ದಿನಾಂಕ:27.03.1999 ರಲ್ಲಿ ಮಾಡಿರುವ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಈ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ಹಿಂದಿನ ಜಿಲ್ಲಾಧಿಕಾರಿಯವರು ದಿನಾಂಕ:23.02.2001 ರಲ್ಲಿ ಮೇಲ್ಮನವಿಯನ್ನು ಪುರಸ್ಕರಿಸಿ ಆದೇಶ ಹೊರಡಿಸಿರುತ್ತಾರೆ.

2ನೇ ಎದುರುದಾರರ ಪರ ವಕೀಲರು ದಿನಾಂಕ:18.02.2003ರಲ್ಲಿ ಅರ್ಜಿ ಸಲ್ಲಿಸಿ ದಿನಾಂಕ:23.02.2001 ರಂದು ಜಿಲ್ಲಾಧಿಕಾರಿಯವರು ಸಾಕಷ್ಟು ಕಾಲಾವಕಾಶ ನೀಡದೇ ಎದುರುದಾರರ ವಾದ ಆಲಿಸದೇ ಆದೇಶ ಹೊರಡಿಸಿರುತ್ತಾರೆ. ಈ ಆದೇಶವನ್ನು ರದ್ದುಪಡಿಸಿ ಪ್ರಕರಣವನ್ನು ಪುನರ್ ಸ್ಥಾಪಿಸಿ ಮರು ವಿಚಾರಣೆ ನಡೆಸಿ ತೀರ್ಮಾನಿಸಲು ಕೋರಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 25 ಮತ್ತು ಸಿ.ಪಿ.ಸಿ. ಕಲಂ 151 ರಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2ನೇ ಎದುರುದಾರರ ಕೋರಿಕೆಯನ್ನು ಪರಿಗಣಿಸಿ ಮರುವಿಚಾರಣೆ ನಡೆಸಲು ತೀರ್ಮಾನಿಸಿದ ಜಿಲ್ಲಾಧಿಕಾರಿಯವರು ಪ್ರಕರಣವನ್ನು ಪುನರ್ ಸ್ಥಾಪಿಸಿ, ಉಭಯತ್ರರಿಗೂ ನೋಟೀಸ್ ನೀಡಲು ಸೂಚಿಸಿರುತ್ತಾರೆ. ದಿನಾಂಕ:23.09.2016 ರವರೆಗೆ ವಿವಿದ ದಿನಾಂಕಗಳಲ್ಲಿ ವಿಚಾರಣೆ ನಡೆದಿರುತ್ತದೆ. ಈಗಾಗಾಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ಉಭಯತ್ರರೂ ತಮ್ಮ ಪರ ಲಿಖಿತ ವಾದ ಸಲ್ಲಿಸಿರುವುದಾಗಿ ತಿಳಿಸಿರುವುದರಿಂದ ಪ್ರಕರಣವನ್ನು ದಿನಾಂಕ:23.09.2016 ರಂದು ಆದೇಶಕ್ಕೆ ಕಾಯ್ದಿರಿಸಲಾಯಿತು.

ಮೇಲ್ಮನವಿದಾರರಾದ L. ರಾಮಯ್ಯ ಬಿನ್ ಲಕ್ಷ್ಮಣ @ ಕುಂದೇಗೌಡ, ಇವರು ವಕೀಲರ ಮೂಲಕ ಸಲ್ಲಿಸಿರುವ ಮೇಲ್ಮನವಿಯಲ್ಲಿನ ಮುಖ್ಯ ಅಂಶಗಳು ಕೆಳಕಂಡಂತೆ ಇರುತ್ತದೆ.

ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ ಲಕ್ಷ್ಮೀಪುರ ಗ್ರಾಮದ ಸ.ನಂ.53 ರಲ್ಲಿ 4-05 ಎಕರೆ/ಗುಂಟೆ, ಸ.ನಂ.52 ರಲ್ಲಿ 4-06 ಎಕರೆ/ಗುಂಟೆ ಜಮೀನು ಮೂಲತಃ ಸರ್ಕಾರಿ ಜಮೀನಾಗಿದ್ದು, ಈ ಜಮೀನನ್ನು ತಮ್ಮಯ್ಯಾಚಾರ್ ಮತ್ತು ವೀರಾಚಾರ್ ಇವರಿಗೆ ಮಂಜೂರಾಗಿರುತ್ತದೆ. ಮೇಲ್ಮನವಿದಾರರು ಮಂಜೂರಾತಿದಾರರಿಂದ ಈ ಜಮೀನನ್ನು ದಿನಾಂಕ:17.09.1998 ರಲ್ಲಿ ಕ್ರಯಕ್ಕೆ ಪಡೆದಿದ್ದು, ಕ್ರಯಕ್ಕೆ ಪಡೆದಾಗಿನಿಂದ ಸದರಿ ಜಮೀನಿನ ಸ್ವಾಧೀನಾನುಭವದಲ್ಲಿದ್ದು, ತೆಂಗಿನಮರಗಳನ್ನು ಬೆಳೆಸಿರುತ್ತಾರೆ. ಪ್ರಶ್ನಿತ ಜಮೀನು ಮೂಲತಃ ಸ.ನಂ.5 ಸರ್ಕಾರಿ ಜಮೀನಾಗಿದ್ದು, ಇದನ್ನು ದುರಸ್ತಿಪಡಿಸಲು ಕೋರಿದ್ದ ಮೇರೆಗೆ (ADLR) ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ತುಮಕೂರು ಇವರ ಸಂಖ್ಯೆ:1118/96 ದಿನಾಂಕ:25.12.1995 ರಲ್ಲಿ ಗಡಿ ಗುರುತಿಸಿ ಸ.ನಂ.52 ಮತ್ತು 53 ಎಂದು ದುರಸ್ತಿಪಡಿಸಿರುತ್ತಾರೆ. ಈ ದುರಸ್ತಿಯ ಆದೇಶವನ್ನು ಪ್ರಶ್ನಿಸಿ 2ನೇ ಎದುರುದಾರರಾದ ಚಿಕ್ಕಹುಚ್ಚಯ್ಯ ಮತ್ತು ದೊಳ್ಳೇಗೌಡ ಇವರು ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ಇವರಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 140(2) ರ ಪ್ರಕಾರ ಮೇಲ್ಮನವಿ ಸಲ್ಲಿಸಲಾಗಿ ಉಪವಿಭಾಗಾಧಿಕಾರಿಯವರ ಪ್ರಕರಣ ಸಂಖ್ಯೆ:R.A-19/1995-96 ದಾಖಲಿಸಿಕೊಂಡು ವಿಚಾರಣೆ ನಡೆಸಿ ದಿನಾಂಕ:27.03.1999 ರಲ್ಲಿ ಮೇಲ್ಮನವಿಯನ್ನು ಪುರಸ್ಕರಿಸಿ, ಪುನರ್ ಪರಿಶೀಲಿಸಿ ಕ್ರಮ ವಹಿಸಲು ತಹಶೀಲ್ದಾರ್, ಕುಣಿಗಲ್ ತಾಲ್ಲೂಕು ಇವರಿಗೆ ನಿರ್ದೇಶಿಸಿರುತ್ತಾರೆ. (ADLR) ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ತುಮಕೂರು ಇವರು ಮಾಡಿರುವ ದುರಸ್ತಿ ಆದೇಶವನ್ನು ಪ್ರಶ್ನಿಸಿ ಉಪವಿಭಾಗಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ ಹಾಗೂ ಈ ಪ್ರಕರಣವನ್ನು ವಿಚಾರಣೆ ನಡೆಸಿ ತೀರ್ಮಾನಿಸಲು ಉಪವಿಭಾಗಾಧಿಕಾರಿಯವರಿಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಆದ್ದರಿಂದ ಉಪವಿಭಾಗಾಧಿಕಾರಿಯವರು ದಿನಾಂಕ:27.03.1999 ರಲ್ಲಿ ಹೊರಡಿಸಿರುವ ಆದೇಶವು ದೋಷಪೂರಿತವಾಗಿರುವುದರಿಂದ ಈ ಆದೇಶವನ್ನು ರದ್ದುಪಡಿಸಿ ADLR ರವರ ದಿನಾಂಕ:25.12.1995 ರಲ್ಲಿ ಮಾಡಿರುವ ದುರಸ್ತಿ ಆದೇಶವನ್ನು ಎತ್ತಿಹಿಡಿಯಬೇಕೆಂದು ಕೋರಿರುತ್ತಾರೆ.

ಪ್ರಕರಣದ ಪ್ರಶ್ನಿತ ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸ.ನಂ.5 ರಲ್ಲಿನ 4-05 ಗುಂಟೆ ಮತ್ತು 4-06 ಗುಂಟೆ ವಿಸ್ತೀರ್ಣದ ಜಮೀನನ್ನು ಮೇಲ್ಮನವಿದಾರರು ತಮ್ಮಯ್ಯಾಚಾರ್ ಮತ್ತು ವೀರಾಚಾರ್ ಇವರಿಂದ ಕ್ರಯಕ್ಕೆ ಪಡೆದಿದ್ದು, ಕ್ರಯದಂತೆ ಮತ್ತು ಮೇಲ್ಮನವಿದಾರರ ಕೋರಿಕೆಯಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರ ಆದೇಶ ಸಂಖ್ಯೆ:1118/1995 ದಿನಾಂಕ:25.12.1995 ರಂತೆ ದುರಸ್ತಿಯಾಗಿರುತ್ತದೆ ಹಾಗೂ ಈ ಆದೇಶದ ವಿರುದ್ಧ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 49(E) ರಿಂದ (L) ರಂತೆ ಸರ್ವೇ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಉಪವಿಭಾಗಾಧಿಕಾರಿಗಳ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಉಪವಿಭಾಗಾಧಿಕಾರಿಗಳ ಆದೇಶವು ದೊಷಪೂರಿತವೆಂದು ಬಾವಿಸಿ ಮೇಲ್ಮನವಿಯನ್ನು ಪುರಸ್ಕರಿಸಿ ದಿನಾಂಕ:23.03.2001 ರಂದು ಈ ನ್ಯಾಯಾಲಯದಲ್ಲಿ ಅಂತಿಮ ಆದೇಶವನ್ನು ಹೊರಡಿಸಲಾಗಿದೆ.

2ನೇ ಎದುರುದಾರರು ತಮ್ಮ ಮರು ಪರಿಶೀಲನಾ ಅರ್ಜಿಯಲ್ಲಿ ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಲಕ್ಷ್ಮೀಪುರ ಗ್ರಾಮದ ಸ.ನಂ.5 ರಲ್ಲಿ ಒಟ್ಟು 08-00 ಎಕರೆ ಜಮೀನಿದ್ದು, ಈ ಜಮೀನಿನಲ್ಲಿ 0-35 ಗುಂಟೆ ಜಮೀನನ್ನು ಸುಮಾರು 20 ವರ್ಷಗಳಿಂದ ಅನಧೀಕೃತ ಸಾಗುವಳಿ ಮಾಡುತ್ತಿದ್ದು, ಮಂಜೂರಾತಿ ಕೋರಿ ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ಇವರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸರ್ಕಾರಕ್ಕೆ T-T ಸಹ ಪಾವತಿಸಿರುತ್ತಾರೆ. ಈ ಜಮೀನಿನಲ್ಲಿ ಅರ್ಜಿದಾರರು ಹೆಚ್ಚು ಹಣವನ್ನು ವ್ಯಯಮಾಡಿ ವ್ಯವಸಾಯದ ಜಮೀನನ್ನಾಗಿ ಪರಿವರ್ತಿಸಿ ಮಾವಿನ ಮರಗಳನ್ನು ಬೆಳೆಸಿರುತ್ತಾರೆ. 0-35 ಗುಂಟೆ ಜಮೀನಿಗೆ ಪಹಣಿಯಲ್ಲಿ ಅರ್ಜಿದಾರರ ಹೆಸರು ದಾಖಲಾಗಿರುತ್ತದೆ. ಇವುಗಳನ್ನು ಪರಿಶೀಲಿಸದೇ ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ಇವರು 4-05 ಗುಂಟೆ ತಮ್ಮಯಾಚಾರ್ ಇವರಿಗೆ ಹಾಗೂ 4-06 ಗುಂಟೆ ಜಮೀನನ್ನು ವೀರಾಚಾರ್ ಇವರಿಗೆ ಮಂಜೂರಾತಿ ಮಾಡಿದ್ದು, ಈ ಮಂಜೂರಾತಿ ಜಮೀನನ್ನು ಮೇಲ್ಮನವಿದಾರರಾದ L. ರಾಮಯ್ಯ ಬಿನ್ ಲಕ್ಷ್ಮಣ @ ಕುಂದೇಗೌಡ, ಇವರಿಗೆ ಕ್ರಯಕ್ಕೆ ನೀಡಿರುತ್ತಾರೆ. ಕ್ರಯಕ್ಕೆ ಪಡೆದ ನಂತರ ದುರಸ್ತಿಪಡಿಸಲು ಅರ್ಜಿ ಸಲ್ಲಿಸಿದ್ದ ಕಾರಣ ದಿನಾಂಕ:25.10.1995 ರಲ್ಲಿ ಹೊಸ ಸ.ನಂ.52 ಮತ್ತು 53 ಎಂದು ನೀಡಲಾಗಿದೆ. ಈ ದುರಸ್ತಿ ಸಮಯದಲ್ಲಿ ಮೇಲ್ಮನವಿದಾರರು ಅಧಿಕೃತ ಸಾಗುವಳಿ ಮಾಡುತ್ತಿರುವ 0-35 ಗುಂಟೆ ಸೇರಿ ದುರಸ್ತಿ ಪಡಿಸಿದ್ದು, ಇದರಿಂದ ಅರ್ಜಿದಾರರ ಅನಧೀಕೃತ ಸಾಗುವಳಿ ಮಾಡುತ್ತಿರುವ 0-35 ಗುಂಟೆ ಜಮೀನಿಗೆ ತೊಂದರೆಯಾಗಿರುತ್ತದೆ. ಈ ದುರಸ್ತಿಯನ್ನು ರದ್ದುಪಡಿಸಲು ಉಪವಿಭಾಗಾಧಿಕಾರಿಗಳು, ತುಮಕೂರು ಉಪವಿಭಾಗ, ತುಮಕೂರು ಇವರಲ್ಲಿ ಮೇಲ್ಮನವಿ ಸಲ್ಲಿಸಲಾಗಿ ಉಪವಿಭಾಗಾಧಿಕಾರಿಯವರು ನಂ.R.A-19/1995-96ರ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿ ಮೇಲ್ಮನವಿಯನ್ನು ಪುರಸ್ಕರಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 140(2) ರಂತೆ ವಿಚಾರಣೆ ನಡೆಸಿ ಇತ್ಯರ್ಥಪಡಿಸಲು, ಅಲ್ಲದೇ ಮೇಲ್ಮನವಿದಾರರು 0-35 ಗುಂಟೆ ಜಮೀನಿನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆಯೇ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಸೂಚಿಸಿ ತಹಶೀಲ್ದಾರ್, ಕುಣಿಗಲ್ ತಾಲ್ಲೂಕು, ಇವರಿಗೆ ಹಿಂತಿರುಗಿಸಿರುತ್ತಾರೆ. ಈ ಆದೇಶದ ವಿರುದ್ಧ L. ರಾಮಯ್ಯ ಇವರು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು,ಪ್ರಕರಣಸಂಖ್ಯೆ:R.A-04/2000-01 ರಲ್ಲಿ ಎದುರುದಾರರ ಪರ ವಕೀಲರು ಸಲ್ಲಿಸಿರುವ ವಾದವನ್ನು ಪರಿಶೀಲಿಸದೇ ಮೇಲ್ಮನವಿಯನ್ನು ಪುರಸ್ಕರಿಸಿ, ಉಪವಿಭಾಗಾಧಿಕಾರಿಯವರ ದಿನಾಂಕ:27.03.1999 ರ ಆದೇಶವನ್ನು ರದ್ದುಪಡಿಸಿ ದಿನಾಂಕ:23.02.2001 ರಲ್ಲಿ ಅಂತಿಮ ಆದೇಶ ಹೊರಡಿಸಿರುತ್ತಾರೆ. ಆದ್ದರಿಂದ ಈ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸುತ್ತಿದ್ದು, ಜಿಲ್ಲಾಧಿಕಾರಿಯವರು ದಿನಾಂಕ:23.03.2001 ರಲ್ಲಿ ಹೊರಡಿಸಿರುವ ಆದೇಶವು ಏಕಪಕ್ಷೀಯ ತೀರ್ಮಾನವಾಗಿದ್ದು, ಈ ಆದೇಶವನ್ನು ರದ್ದುಪಡಿಸಿ ಪುನರ್ ಪರಿಶೀಲಿಸಿ ಪರಿಷ್ಕೃತ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಪ್ರಕರಣವನ್ನು ದಿನಾಂಕ:18.02.2003 ರಿಂದ ವಿವಿದ ದಿನಾಂಕಗಳಲ್ಲಿ ವಿಚಾರಣೆ ನಡೆದಿದ್ದು, ದಿನಾಂಕ:23.09.2016 ರಲ್ಲಿ ಉಭಯತ್ರರ ವಾದ ಆಲಿಸಿ ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಲಾಯಿತು. ಈ ನ್ಯಾಯಾಲಯದ ಹಾಗೂ ಮೇಲ್ಮನವಿದಾರರ 2ನೇ ಎದುರುದಾರರ ಮತ್ತು ಕೆಳ ನ್ಯಾಯಾಲಯದ ಪರಿಶೀಲಿಸಿರುತ್ತದೆ. ಉಪವಿಭಾಗಾಧಿಕಾರಿಯವರ ಪ್ರಶ್ನಿತ R.A-19/1995-96 ರ ದಿನಾಂಕ:27.03.1999 ರ ಆದೇಶದ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 50 ರಡಿಯಲ್ಲಿ ಸಲ್ಲಿಸಿದ್ದ ಮೇಲ್ಮನವಿಯು

ವಿಚಾರಣೆ ನಡೆದು ಇದೇ ಕ್ರಮಾಂಕದಲ್ಲಿ ದಿನಾಂಕ:23.03.2001 ರಂದು ಅಂತಿಮ ಆದೇಶ ಹೊರಡಿಸಲಾಗಿರುತ್ತದೆ.

2ನೇ ಎದುರುದಾರರು ಈ ಆದೇಶವನ್ನು ಸುಮಾರು 1 ವರ್ಷ 10 ತಿಂಗಳ ನಂತರ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದು, ವಿಳಂಬಕ್ಕೆ ಕಾರಣವನ್ನು ತಿಳಿಸಿಲ್ಲ. ಅಲ್ಲದೇ ಈ ಹಿಂದೆ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಹೊರಡಿಸಿದ್ದ ಆದೇಶದ ವಿರುದ್ದ 2ನೇ ಎದುರುದಾರರು ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸದೇ ಇದೇ ನ್ಯಾಯಾಲಯದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 25 ರಡಿ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಯವರು ಒಮ್ಮೆ ಇತ್ಯರ್ಥಪಡಿಸಿದ ವಿಷಯವನ್ನು ಮತ್ತೆ ಇತ್ಯರ್ಥಪಡಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. 2ನೇ ಎದುರುದಾರರು ಜಿಲ್ಲಾಧಿಕಾರಿಯವರ ಆದೇಶದಿಂದ ಬಾಧಿತರಾಗಿದ್ದಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿ ಕೆಳಗಿನಂತೆ ಆದೇಶಿಸಿದೆ.

-:ಆದೇಶ:-

ಮೇಲೆ ವಿವರಿಸಿದ ಕಾರಣಗಳಿಂದ 2ನೇ ಎದುರುದಾರರು ಸಲ್ಲಿಸಿರುವ ಪುನರ್ ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ದಿನಾಂಕ: 06-01-2017 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

KPM
ಜಿಲ್ಲಾಧಿಕಾರಿ, 06/01/17
ತುಮಕೂರು ಜಿಲ್ಲೆ, ತುಮಕೂರು.

ಜಿಲ್ಲಾಧಿಕಾರಿಗಳ ಪರವಾಗಿ
ತುಮಕೂರು ಜಿಲ್ಲೆ
13/01/17